ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್



ಡನ್ನೋನ ಸಂಗೀತ ಪಾಠ

02





ಡನ್ನೋನ ಸಾಹಸ ಕತೆಗಳು

ಡನ್ನೋನ ಸಂಗೀತ ಪಾಠ

02

ನಿಕೋಲಾಯ್ ನೋಸೊವ್

ಚಿತ್ರಗಳು: ಬೋರಿಸ್ ಕಲಾಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಡನ್ನೋಗೆ ಯಾವ ಕೆಲಸವನ್ನೂ ಸರಿಯಾಗಿ ಮಾಡಲು ಎಂದಿಗೂ ಆಗುತ್ತಿರಲಿಲ್ಲ. ಅವನು ಎಂದಿಗೂ ಅಕ್ಷರಗಳನ್ನು ಸೇರಿಸಿ ಉಚ್ಚಾರಣೆ ಮಾಡಿ ಓದುವ ಹಂತವನ್ನು ಮುಟ್ಟಲಿಲ್ಲ. ಆದರೆ ಅವನಿಗೆ ಮುದ್ರಿತ ಅಕ್ಷರಗಳನ್ನು ಮಾತ್ರ ಬರೆಯಲು ಬರುತ್ತಿತ್ತು. ಕೆಲವರು ಅವನ ತಲೆ ಖಾಲಿ ಇದೆ ಎಂದು ಹೇಳುತ್ತಿದ್ದರು. ಆದರೆ ಅದು ನಿಜವಲ್ಲ; ಏಕೆಂದರೆ ಅವನ ತಲೆ ಖಾಲಿಯಾಗಿದ್ದರೆ ಅವನಿಗೆ ಎಳ್ಳಷ್ಟು ಯೋಚಿಸಲೂ ಆಗುತ್ತಿರಲಿಲ್ಲ. ನಿಜ ಹೇಳಬೇಕೆಂದರೆ, ಅವನು ಹೆಚ್ಚು ಯೋಚಿಸುತ್ತಿರಲಿಲ್ಲ. ಅವನು ತನ್ನ ಬೂಟುಗಳನ್ನು ತಲೆಯ ಮೇಲೆ ಹಾಕದೆ ಕಾಲುಗಳ ಮೇಲೆಯೇ ಹಾಕಿಕೊಳ್ಳುತ್ತಿದ್ದನು. ಇಷ್ಟಾದರೂ ಮಾಡಲು ಸ್ವಲ್ಪ ಯೋಚನೆ ಬೇಕೇ ಬೇಕು.

ಆದರೂ, ಅವನು ಕೆಟ್ಟ ಹುಡುಗನಲ್ಲ. ಅವನಿಗೆ ಕಲಿಯಬೇಕೆಂಬ ಆಸೆ ಇತ್ತು, ಆದರೆ ಕೆಲಸ ಮಾಡಲು ಇಷ್ಟವಿರಲಿಲ್ಲ. ಪ್ರಯತ್ನವೇ ಮಾಡದೆ ಕಲಿಯಬೇಕೆಂದು ಅವನು ಬಯಸುತ್ತಿದ್ದನು. ಮೈಟ್ಸಗಳಲ್ಲಿಯ ಅತ್ಯಂತ ಬುದ್ಧಿವಂತರಿಗೂ ಕೂಡ ಅದು ಸಾಧ್ಯವಾಗಲು ಶಕ್ಯವಿಲ್ಲ.





ಮೈಟ್ಸ್ ಹುಡುಗರು ಮತ್ತು ಮೈಟ್ಸ್ ಹುಡುಗಿಯರು ಸಂಗೀತವನ್ನು ತುಂಬಾ ಪ್ರೀತಿಸುತ್ತಿದ್ದರು. ಅವರಲ್ಲಿಯ ಟ್ರಿಲ್ಸ್ ಒಬ್ಬ ಅತ್ಯುತ್ತಮ ಸಂಗೀತಗಾರನಾಗಿದ್ದನು. ಅವನ ಬಳಿ ಎಲ್ಲ ರೀತಿಯ ಸಂಗೀತ ವಾದ್ಯಗಳಿದ್ದವು. ಅವನು ಅವುಗಳನ್ನು ಆಗಾಗ ನುಡಿಸುತ್ತಿದ್ದನು. ಅವನ ವಾದನೆಯನ್ನು ಮೈಟ್ಸ್ ತುಂಬಾ ಹೊಗಳುತ್ತಿದ್ದರು. ಇದರಿಂದ ಡನ್ನೋಗೆ ಅಸೂಯೆಯಾಗುತ್ತಿತ್ತು. ಒಂದು ದಿನ ಅವನು ಆತನಿಗೆ ಹೇಳಿದನು:

“ನನಗೂ ಸಂಗೀತ ಕಲಿಸು, ನಾನೂ ಸಂಗೀತಗಾರನಾಗಬೇಕು.”


“ಸರಿ, ನಿನಗೆ ಯಾವ ವಾದ್ಯ ಇಷ್ಟ?” ಎಂದು ಟ್ರಿಲ್ಸ್ ಕೇಳಿದನು.







“ಕಲಿಯಲು ಯಾವುದು ಅತ್ಯಂತ ಸುಲಭ?”
“ಬಲಲೈಕಾ.”
“ಅದನ್ನು ನನಗೆ ಕೊಡು, ನಾನು ಪ್ರಯತ್ನಿಸುತ್ತೇನೆ.”
ಟ್ರೆಲ್ಸ್ ಅವನಿಗೆ ಒಂದು ಬಲಲೈಕಾ ಕೊಟ್ಟನು. ಡನ್ನೋ ಅದನ್ನು ಸ್ವಲ್ಪ ಮೀಟಿದನು.
“ಇದು ಸಾಕಷ್ಟು ಧ್ವನಿ ಮಾಡುವುದಿಲ್ಲ. ಇನ್ನೂ ಜೋರಾಗಿ ಧ್ವನಿ ಮಾಡುವ ಯಾವುದನ್ನಾದರೂ ನನಗೆ ಕೊಡು.” ಡನ್ನೋ ಕೇಳಿದನು.







ಟ್ರಿಲ್ಸ್ ಅವನಿಗೆ ಒಂದು ಪಿಟಿಲು ಕೊಟ್ಟನು. ಡನ್ನೋ ಸ್ವಲ್ಪ ಹೊತ್ತು ಅದನ್ನು ನುಡಿಸಿ ನಂತರ ಹೇಳಿದನು:
"ಇದಕ್ಕಿಂತ ಜೋರಾಗಿ ಕೇಳಿಸುವ ಯಾವುದಾದರೂ ವಾದ್ಯ ಇಲ್ಲವೇ?"
"ನನ್ನ ಬಳಿ ಒಂದು ಹಾರ್ನ್ ಇದೆ," ಎಂದು ಟ್ರಿಲ್ಸ್ ಹೇಳಿದನು.
"ಅದನ್ನು ಕೊಡು. ನಾನು ಒಮ್ಮೆ ಪ್ರಯತ್ನಿಸುತ್ತೇನೆ."





ಟ್ರಿಲ್ಸ್ ಅವನಿಗೆ ಒಂದು ದೊಡ್ಡ ಹಿತ್ತಾಳೆಯ ಹಾರ್ನನ್ನು ಕೊಟ್ಟನು. ಡನ್ನೋ ತನ್ನಿಂದಾದಷ್ಟು ಬಲವಾಗಿ ಊದಿದನು. ಆಗ ಅದರಿಂದ ಕರ್ಕಶವಾದ ಧ್ವನಿ ಹೊರಬಂದಿತು.

“ಅದು ಒಳ್ಳೆಯ ವಾದ್ಯ,” ಎಂದು ಡನ್ನೋ ಹೇಳಿದನು. “ಅದು ತುಂಬಾ ಸಪ್ಪಳ ಮಾಡುತ್ತದೆ.”

“ಸರಿ. ಹಾಗಿದ್ದರೆ ಇದನ್ನು ನುಡಿಸಲು ಕಲಿ.” ಟ್ರಿಲ್ಸ್ ಹೇಳಿದನು.

“ಅದನ್ನೇಕೆ ಕಲಿಯಬೇಕು? ಕಲಿಯಲಾರದೆ ನಾನು ಅದನ್ನು ನುಡಿಸುತ್ತೇನೆ.” ಡನ್ನೋ ಹೇಳಿದನು.

“ಅದು ಶಕ್ಯವಿಲ್ಲ” ಟ್ರಿಲ್ಸ್ ಹೇಳಿದನು.

“ಹೌದು, ಬರುತ್ತದೆ! ಕೇಳು!” ಎಂದು ಅವನು ತನ್ನ ಸಂಪೂರ್ಣ ಶಕ್ತಿಯಿಂದ ಹಾರ್ನನ್ನು ಊದಿದನು:

ಬೋ ಓ ಓ ಓಮ್! ಬಾ ಆ ಮ್!

“ನೀನು ಸುಮ್ಮನೆ ಊದುತ್ತಿದ್ದೀಯ. ನುಡಿಸುತ್ತಿಲ್ಲ,” ಎಂದು ಟ್ರಿಲ್ಸ್ ಹೇಳಿದ.

“ನುಡಿಸುತ್ತಿಲ್ಲವೇ?” ಎಂದು ಡನ್ನೋ ತೀಕ್ಷ್ಣವಾಗಿ ಕೇಳಿದ. “ನಾನು ತುಂಬಾ ಚೆನ್ನಾಗಿ ನುಡಿಸುತ್ತಿದ್ದೇನೆ. ನಾನು ತುಂಬಾ ಸಪ್ಪಳ ಮಾಡುತ್ತಿದ್ದೇನೆ.”

“ನೀನು ಸಪ್ಪಳ ಮಾಡಕೂಡದು, ಅದರಿಂದ ಸಂಗೀತ ಹೊರಬರಬೇಕು.”

“ಇದೇ ಸಂಗೀತ.”

“ಇಲ್ಲ, ಇದು ಸಂಗೀತವಲ್ಲ,” ಎಂದು ಟ್ರಿಲ್ಸ್ ಹೇಳಿದ. “ನಿನಗೆ ಸಂಗೀತದ ಕಿವಿಯೇ ಇಲ್ಲ ಎಂಬುದು ನನಗೆ ಅನ್ನಿಸುತ್ತಿದೆ.”


“ನಿನಗೆನೇ ಸಂಗೀತದ ಕಿವಿಯಿಲ್ಲ,” ಎಂದು ಡನ್ನೋ ಕೋಪದಿಂದ ಹೇಳಿದ. “ನಿನಗೆ ಅಸೂಯೆ, ಅಷ್ಟೇ. ನಿನಗೆ ತುಂಬಾ ಇಷ್ಟವಾದ ಹೊಗಳಿಕೆಯಲ್ಲಿ ಬೇರೆ ಯಾರಿಗಾದರೂ ಸ್ವಲ್ಪ ಪಾಲು ಸಿಗಬಹುದೆಂದು ನೀನು ಹೆದರುತ್ತಿದ್ದೀಯ.”

“ಅದು ನಿಜವಲ್ಲ,” ಎಂದು ಟ್ರಿಲ್ಸ್ ಹೇಳಿದ. “ಈ ಹಾರ್ನನ್ನು ತೆಗೆದುಕೊಂಡು, ಕಲಿಯಬೇಕಾದ ಅಗತ್ಯವೇ ಇಲ್ಲ ಎಂದು ನಿನಗೆ ಅನಿಸಿದರೆ, ಇಷ್ಟವಾದಷ್ಟು ನುಡಿಸು. ಜನರು ನಿನ್ನನ್ನು ಹೇಗೆ ಹೊಗಳುತ್ತಾರೆ ನೋಡುವ!”





“ನಾನು ಅದನ್ನೇ ಮಾಡುತ್ತೇನೆ,” ಎಂದು ಡನ್ನೋ ಹೇಳಿದನು.
ಮತ್ತು ಅವನು ಹಾರ್ನನ್ನು ತೆಗೆದುಕೊಂಡು ಊದಲು ಪ್ರಾರಂಭಿಸಿದನು. ಅವನಿಗೆ ಅದನ್ನು ಹೇಗೆ ನುಡಿಸಬೇಕೆಂದು ಗೊತ್ತಿರಲಿಲ್ಲ, ಆದ್ದರಿಂದ ಹಾರ್ನ ಗರ್ಜಿಸಿತು, ಕೆಮ್ಮಿತು ಮತ್ತು ಉಸಿರುಗಟ್ಟಿದಂತೆ ಸಪ್ಪಳ ಮಾಡತೊಡಗಿತು. ಟ್ರಿಲ್ಸ್‌ಗೆ ಇದನ್ನು ಸಹಿಸಲಾಗದಾಗ, ಅವನು ತಾನು ಧರಿಸಿದ್ದ ವೆಲ್ವೆಟ್ ಜಾಕೆಟ್ ಬದಲು ಮಾಡಿ ಒಂದು ಟಾಯ್ ಧರಿಸಿ ತನ್ನ ಸ್ನೇಹಿತನನ್ನು ನೋಡಲು ಹೋದನು.
ಆ ಸಂಜೆ, ಎಲ್ಲರೂ ಮನೆಯಲ್ಲಿದ್ದಾಗ, ಡನ್ನೋ ಹಾರ್ನನ್ನು ತೆಗೆದುಕೊಂಡು ಮತ್ತೆ ಊದಲು ಪ್ರಾರಂಭಿಸಿದನು.
ಬೂಮ್ ಬೂಮ್ ಬೂಮ್ ಬೂಮ್!
“ಇದೆಂತಹ ಸಪ್ಪಳ?” ಎಂದು ಅವರೆಲ್ಲರು ಕೂಗಿದರು.
“ಅದು ಸಪ್ಪಳವಲ್ಲ,” ಎಂದು ಡನ್ನೋ ಹೇಳಿದನು, “ನಾನು ವಾದ್ಯವನ್ನು ನುಡಿಸುತ್ತಿದ್ದೇನೆ.”
“ಈ ಕ್ಷಣದಲ್ಲೇ ನಿಲ್ಲಿಸು,”
“ಇದರಿಂದ ನನಗೆ ತಲೆನೋವು ಬರುತ್ತಿದೆ.”
“ಅದಕ್ಕೆ ಕಾರಣ ಇಂತಹದನ್ನು ನೀವು ಕೇಳಿರಲಾರಿರಿ. ಒಮ್ಮೆ ಇದರ ಅಭ್ಯಾಸವಾದ ಮೇಲೆ, ಇದು ನಿಮಗೆ ತಲೆನೋವು ಕೊಡುವುದಿಲ್ಲ.” ಎಂದು ಡನ್ನೋ ಹೇಳಿದನು.
“ಆದರೆ ನಮಗೆ ಅಭ್ಯಾಸ ಮಾಡಿಕೊಳ್ಳಲು ಇಷ್ಟವಿಲ್ಲ.”
ಆದರೂ ಡನ್ನೋ ಊದುತ್ತಲೇ ಇದ್ದನು.
ಬೂಮ್ ಬೂಮ್
ಗಿರ್ ಗಿರ್ರ್
ಬೂಮ್ ಬೂಮ್!





"ನಿಲ್ಲಿಸು!" ಎಂದು ಎಲ್ಲಾ ಮೈಟ್ಸಗಳು ಕೂಗಿದರು.
"ನಿನ್ನ ಆ ಭಯಾನಕ ಹಾರ್ನದೊಂದಿಗೆ ಇಲ್ಲಿಂದ ಹೊರಟು ಹೋಗು!"
"ನಾನು ಎಲ್ಲಿಗೆ ಹೋಗಲಿ?"
"ಹೊಲದಲ್ಲಿ ಹೋಗಿ ಅಲ್ಲಿ ನುಡಿಸು."
"ಅಲ್ಲಿ ಯಾರೂ ಇದನ್ನು ಕೇಳಲಾರರು."
"ಯಾರಾದರೂ ಇದನ್ನು ಕೇಳಲೇಬೇಕೇ?"
"ಖಂಡಿತವಾಗಿಯೂ ಕೇಳಬೇಕು."
"ಹಾಗಾದರೆ ಹೊರಗೆ ಹೋಗಿ ನೆರೆಹೊರೆಯವರ ಎದುರು ನಿನ್ನ ಹಾರ್ನನ್ನು ನುಡಿಸು."

ಡನ್ನೋ ಹೊರಗೆ ಹೋಗಿ ಪಕ್ಕದ ಮನೆಯ ಮುಂದೆ ತನ್ನ ಹಾರ್ನನ್ನು ನುಡಿಸಲು ಪ್ರಾರಂಭಿಸಿದ. ನೆರೆಹೊರೆಯವರು ಹೊರಗೆ ಬಂದು ಅಷ್ಟು ಜೋರಾಗಿ ಸಪ್ಪಳ ಮಾಡಬಾರದೆಂದು ಅವನನ್ನು ಬಿನ್ನಯಿಸಿದರು. ಅವನು ಮತ್ತೊಂದು ಮನೆ ಮುಂದೆ ಹೋದನು. ಆದರೆ ಅಲ್ಲಿಂದಲೂ ಅವನನ್ನು ಹೊರ ಕಳುಹಿಸ-ಲಾಯಿತು.



ಮತ್ತೊಂದು ಮನೆಯಲ್ಲಿ ಅದೇ ಘಟನೆ ಸಂಭವಿಸಿದಾಗ, ಅವನು ಕೇವಲ ಹಠದಿಂದ ತನ್ನ ಶಕ್ತಿಯನ್ನೆಲ್ಲಾ ಬಳಸಿ ನುಡಿಸಿದನು. ಇದರಿಂದ ಎಲ್ಲಾ ಜನರು ಕೋಪಗೊಂಡರು. ಅವರು ತಮ್ಮ ಮನೆಗಳಿಂದ ಹೊರಬಂದು ಅವನನ್ನು ಅಲ್ಲಿಂದ ಓಡಿಸಿದರು. ಅವರಿಂದ ತಪ್ಪಿಸಿಕೊಳ್ಳಲು ಅವನು ಬಹಳ ಕಷ್ಟಪಡಬೇಕಾಯಿತು. ಅಂದಿನಿಂದ ಅವನು ಅದನ್ನು ಮತ್ತೇ ಎಂದಿಗೂ ನುಡಿಸಲಿಲ್ಲ.

"ನನ್ನ ಸಂಗೀತವನ್ನು ಯಾರೂ ಮೆಚ್ಚುವುದಿಲ್ಲ. ಅವರು ಇನ್ನೂ ಅದನ್ನು ಅರ್ಥಮಾಡಿಕೊಳ್ಳುವಷ್ಟು ಬೆಳೆದಿಲ್ಲ. ಅವರು ಅದನ್ನು ಅರ್ಥ ಮಾಡಿಕೊಳ್ಳುವಷ್ಟು ಬೆಳೆದಾಗ ಅವರು ಅದನ್ನು ಕೇಳಲು ಬಯಸಬಹುದು. ಆದರೆ ಆಗ ತುಂಬಾ ತಡವಾಗಬಹುದು. ನಾನು ಅವರಿಗಾಗಿ ನುಡಿಸುವುದಿಲ್ಲ.' ಎಂದು ಡನ್ನೋ ತನ್ನಷ್ಟಕ್ಕೆ ತಾನೇ ಅನ್ನುತ್ತ ಸುಮ್ಮನಾದನು.







